IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)

An International Open Access, Peer-reviewed, Refereed Journal

# "ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾರತೀಯ ಪತ್ರಿಕೆಗಳ ಕೊಡುಗೆಯಾಗಿ ಅಂಕಣ ಸಾಹಿತ್ಯ"

**ಬೋವಿ ಹೋನ್ನಪ್ಪ**

ಸಂಶೋಧನ ವಿದ್ಯಾರ್ಥಿ

ಡಾ.ಆರ್.ಸಿ.ಹಿರೇಮಠ ಕನ್ನಡ ಅಧ್ಯಯನ ಪೀಠ

ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ

**ಮಾರ್ಗದರ್ಶಕರು**

**ಡಾ. ಅನಿತಾ ಕೆ. ಗುಡಿ**

ಡಾ.ಆರ್.ಸಿ.ಹಿರೇಮಠ ಕನ್ನಡ ಅಧ್ಯಯನ ಪೀಠ

ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ

ಭಾರತದ ಸ್ವಾತಂತ್ರ್ಯ ಹೋರಾಟ ಮತ್ತು ಹೋರಾಟಗಾರರ ಬಗ್ಗೆ ಚರ್ಚಿಸುವಾಗ ನಮ್ಮ ಅವಗಹನೆಗೆ ಬರುವ ಬಹುಮುಖ್ಯವಾದ ವಿಷಯಾಂಶವೆಂದರೆ, ನಮ್ಮ ಚಳುವಳಿಗಾರರಲ್ಲಿ ಅದೆಷ್ಟೋ ಜನರು ಪತ್ರಕರ್ತರಿದ್ದರು ಎನ್ನುವ ಸತ್ಯಾಂಶವು ಗೋಚರಿಸುತ್ತದೆ. ಸ್ವಾತಂತ್ರ್ಯ ವೀರರ ಅನೇಕ ಪತ್ರಿಕೆಗಳನ್ನು ಅವಲೋಕಿಸಿದಾಗ ಅಲ್ಲಿ ತಮ್ಮ ಹೋರಾಟದ ಒಂದು ಪ್ರಮುಖ ಅಸ್ತ್ರವಾಗಿ ಅಂಕಣಗಳು ಇರುವುದು ಸಂಶೋಧನೆ ಹಿನ್ನೆಲೆಯಲ್ಲಿ ಕಂಡುಬರುತ್ತದೆ. ಹೀಗೆ ಪತ್ರಿಕಾ ವೃತ್ತಿಯು ಭಾರತದ ಸ್ವಾತಂತ್ರ್ಯ ಚಳುವಳಿಯ ಭಾಗವಾಗಿರುವುದು ಕಂಡುಬರುತ್ತದೆ. ಅದರಲ್ಲಿಯೂ ಪತ್ರಿಕೆಯ ಅವಿಭಾಜ್ಯ ಅಂಗವಾಗಿ ಅಂಕಣಗಳಿರುವುದು ಸಂಶೋಧನೆಯಿಂದ ತಿಳಿದುಬರುತ್ತವೆ. ರಾಷ್ಟ್ರೀಯ ಪ್ರಜ್ಞಾ ಭಾವವನ್ನು ಮತ್ತು ಸ್ವದೇಶ ಹಾಗೂ ಸ್ವರಾಜ್ಯ ಅಭಿಮಾನವನ್ನು ಜನತೆಯಲ್ಲಿ ಕಟ್ಟಿ ಬೆಳಸಲು ಅಂಕಣಗಳು ಪ್ರಮುಖವಾದ ಪಾತ್ರವಹಿಸಿವೆ. ನಿಯತಕಾಲಿಕೆಗಳಲ್ಲಿ ಸ್ವಾತಂತ್ರ್ಯದ ಕಿಚ್ಚನ್ನು ಸದಾ ಜೀವಂತವಾಗಿಡಲು ಅಂಕಣಗಳ ಪ್ರಾಮುಖ್ಯತೆ ಬಹುದೊಡ್ಡದಾಗಿರುವು ಅಂಶವು ಶೋಧನೆಯಲ್ಲಿ ಕಂಡುಬರುತ್ತದೆ.

ಭಾರತಿಯ ಮನಸ್ಸುಗಳಲ್ಲಿ ಸ್ವರಾಜ್ಯದ ಕಲ್ಪನೆಯು ಬೃಹತ್ ಪ್ರಮಾಣದಲ್ಲಿ ರಾಷ್ಟ್ರೀಯ ಆಂದೋಲನವಾಗಿ ಹೊರಹೊಮ್ಮಲು ಪತ್ರಿಕೆಗಳ ಮತ್ತು ಅದರ ಅಂಗವಾದ ಅಂಕಣಗಳ ಪಾತ್ರವು ಬಹುದೊಡ್ಡದಾಗಿದೆ. ಸಂಸ್ಥಾನಗಳಾಗಿ ಹರಿದು ಹಂಚಿಹೋಗಿದ್ದ ಭಾರತ ದೇಶವನ್ನು ಒಂದು ರಾಷ್ಟ್ರವಾಗಿ ಒಗ್ಗೂಡಿಸಿ. ದೇಶದ ಜನತೆಯು ಸ್ವಾತಂತ್ರ್ಯದ ಕನಸನ್ನು ನನಸು ಮಾಡಿಕೊಳ್ಳಲು ಪ್ರಕ್ರಿಯೆ ಪ್ರಾರಂಭಿಸಿತು. ಈ ಪ್ರಕ್ರಿಯೆಗೆ ಪೂರಕವಾಗಿ ದೊರೆತ ಅಭೂತಪೂರ್ವ ಸಾಧನ ಸಾಮಗ್ರಿಯೇ ಪತ್ರಿಕಾಮಾಧ್ಯಮವಾಗಿದೆ. ಹೀಗೆ ಪತ್ರಿಕೆಗಳಲ್ಲಿ 'ನಮ್ಮ ನೆಲದಲ್ಲಿ ನಾವುಗಳೆ ಪರತಂತ್ರರಾಗಿದ್ದೇವೆ' 'ಈ ಬಂಧನದಿಂದ ಹೇಗಾದರೂ ಮುಕ್ತಿ ಪಡೆಯೋಣ' , 'ಸ್ವಾತಂತ್ರ್ಯಕ್ಕಾಗಿ ಸಂಘಟನೆ ಅನಿವಾರ್ಯ' ಹೀಗೆ ಅನೇಕ ರೀತಿಯ ಅಂಕಣಗಳು ಪ್ರಕಟಗೊಂಡಿರುವುದನ್ನು ಅವಲೋಕಿಸಲಾಯಿತು. ಹೀಗೆ ಪ್ರತಿಯೊಬ್ಬ ಭಾರತಿಯನಲ್ಲಿಯೂ ನಾವೆಲ್ಲರು ಒಂದೇ ಎಂಬ ಪ್ರಜ್ಞೆ ಒಡಮೂಡಲು ಪತ್ರಿಕೆಗಳು ಒಟ್ಟಾಗಿ ಪ್ರಭಾವ ಬೀರಿರುವುದು ಕಲ್ಪನೆಗೂ ನಿಲುಕದ ವಿಷಯವಾಗಿದೆ.

ಪತ್ರಿಕೋದ್ಯಮದ ಪ್ರಾರಂಭದಲ್ಲಿ ದಿನಪತ್ರಿಕೆಗಿಂತ ಹೆಚ್ಚಾಗಿ ವಾರ, ಪಾಕ್ಷಿಕ, ಮಾಸಿಕ, ದ್ವೈಮಾಸಿಕ ತ್ರೈಮಾಸಿಕಗಳೇ ಹೆಚ್ಚಾಗಿ ಕಾಣಿಸಿಕೊಂಡವು. ಆ ಕಾಲಘಟ್ಟದಲ್ಲಿ ಸುದ್ದಿ–ಸಮಾಚಾರಗಳು ತಾಂತ್ರಿಕತೆಯ ಕಾರಣವಾಗಿ ಅತೀ ಬೇಗ ಪ್ರಸಾರಗೊಳ್ಳುತ್ತಿರಲಿಲ್ಲ. 'ಮೊಟ್ಟಮೊದಲ ದಿನಪತ್ರಿಕೆಯು ಇಂಗ್ಲೆಂಡಿನಲ್ಲಿ ಕ್ರಿ.ಶ. 1660 ರಲ್ಲಿ ಪ್ರಾರಂಭವಾದರೂ ಸಹಿತ, ಕ್ರಿ.ಶ.1665 ರಲ್ಲಿ ಹುಟ್ಟಿದ 'ಲಂಡನ್ ಗೆಜೆಟ್' ಮೊದಲ ಸರ್ಕಾರಿ ವೃತ್ತ ಪತ್ರಿಕೆಯಾಯಿತು. ಕ್ರಿ.ಶ.1677 ರ 'ಮಾರ್ನಿಂಗ್ ಪೋಸ್ಟ' ಇಂಗ್ಲಿಷ್ ಪತ್ರಿಕೋದ್ಯಮದ ಅತ್ಯಂತ ಹಳೆಯ ದಿನ ಪತ್ರಿಕೆಯಾಯಿತು. ಕ್ರಿ.ಶ.1785 ರಲ್ಲಿ ಪ್ರಾರಂಭವಾದ 'ಟೈಮ್' ಪತ್ರಿಕೆಯು ಇಂಗ್ಲೆಂಡಿನಲ್ಲಿ ಇವತ್ತಿಗೂ ಪ್ರಮುಖ ಪತ್ರಿಕೆಯಾಗಿದೆ. ಇದರ ಅಡಿಯಲ್ಲಿ ಇಂದಿಗೂ ಪ್ರಕಟಗೊಳ್ಳುವ ಖಿ.ಐ.ಖ–ಖಿಟಚಿ ಖಣಜಡಿಚಿಡಿಥಿ ಖಣಠಿಠಿಟುಟಜಟಣ ಅತ್ಯಂತ ಪ್ರಮುಖ ಸಾಹಿತ್ಯ ಪತ್ರಿಕೆಯಾಗಿದೆ.' [1]

'ಭಾರತದ ಪತ್ರಿಕೋದ್ಯಮದ ಇತಿಹಾಸವನ್ನು ವಿದೇಶಿಗನಾದ 'ಜೇಮ್ಸ್ ಅಗಸ್ಟಸ್ ಹೈಕಿ' ಎಂಬುವನು ಕ್ರಿ.ಶ.1780ರಲ್ಲಿ ತಾನು ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಹಿರಿಯ ಅಧಿಕಾರಿಗಳೊಂದಿಗೆ ಹೊಂದಿದ್ದ ಪ್ರಭಾವದಿಂದಾಗಿ ಪ್ರಾರಂಭಿಸಿದ 'ದಿ ಬೆಂಗಾಲ್ ಗೆಜೆಟ್' ಎಂಬ ಸಮಾಚಾರ ಪತ್ರಿಕೆಯ ಮೂಲಕ ಗುರುತಿಸಲಾಯಿತು. ಇದರ ಭೌತಿಕ ಸ್ವರೂಪವನ್ನು ನಾಡಿಗ ಕೃಷ್ಣಮೂರ್ತಿಯವರು ಹೀಗೆ ಗುರುತಿಸುತ್ತಾರೆ. "ಈಗ ಬರುತ್ತಿರುವ ಪತ್ರಿಕೆಗೂ ಮತ್ತು ಆಗನ ಪತ್ರಿಕೆಗೂ ತುಂಬಾ ವ್ಯತ್ಯಾಸವಿದೆ. 12" ಉದ್ದ 8" ಅಗಲದ ಪತ್ರಿಕೆಯಾಗಿದ್ದು. ಅದು ಎರಡು ಪುಟಗಳು, ಮೂರು ಕಾಲಂಗಳು ಎಂದು ಅಭಿಪ್ರಾಯ ವ್ಯಾಕ್ತಪಡಿಸಿದ್ದಾರೆ.' [2]

ಕನ್ನಡ ಸಾಹಿತ್ಯದಲ್ಲಿ ಅಂಕಣ ಸಾಹಿತ್ಯಕ್ಕೆ ಸುಧೀರ್ಘ ಇತಿಹಾಸವಿದ್ದರೂ ಕೂಡಾ ಮೊಟ್ಟ ಮೊದಲ ಅಂಕಣ ಯಾವುದು? ಎಂಬುದರ ಕುರಿತು ವಿದ್ವಾಂಸರಲ್ಲಿ ಸ್ಪಷ್ಟತೆ ಇಲ್ಲ. ಸದ್ಯಕ್ಕೆ ಶೋಧನೆಯ ಮಟ್ಟಿಗೆ 'ಜುಲೈ 1, 1843 ರಂದು ಉದಯಿಸಿದ ಕನ್ನಡದ ಪ್ರಥಮ ಪತ್ರಿಕೆ 'ಮಂಗಳೂರು ಸಮಾಚಾರ'ದಲ್ಲಿ ಅದರ ಸಂಪಾದಕ ಹರ್ಮನ್ ಮೊಗ್ಲಿಂಗ್ 'ನೈತಿಕ ವಿಚಾರ'ಗಳು ಎಂಬ ಅಂಕಣವನ್ನು ಬರೆಯಲಾರಂಭಿಸಿದರು.'2 ಅದೇ ಅಂಕಣವು ಕನ್ನಡದ ಮೊಟ್ಟ ಮೊದಲ ಅಂಕಣವಾಗಿದೆ. ಎಂದು ವಿದ್ವಾಂಸರ ಅಂಬೋಣವಾಗಿದೆ. ಸಂಶೋಧನೆಯ ಆಧಾರದಿಂದ ಹೇಳುವುದಾದರೆ ಇದೇ ಅಂಕಣ ಮೊದಲ ಅಂಕಣವಾಗಿರಲಾರದು. ಇದಕ್ಕಿಂತ ಮುಂಚೆ ಇಂತಹ ಅನೇಕ ಬರಹಗಳು ಜಾಹೀರಾತು ರೂಪದಲ್ಲಿ ಪತ್ರಿಕೆಗಳಲ್ಲಿ ಬಂದಿರಬೇಕು ಅದಕ್ಕೆ ಪ್ರತ್ಯೇಕ ನಾಮವಿಲ್ಲದ ಕಾರಣದಿಂದಾಗಿ ಇದೇ ಮೊದಲ ಅಂಕಣವೆಂದು ನಿಶ್ಚಿತವಾಗಿ ಹೇಳಲು ಆಗುವುದಿಲ್ಲ. ಆದ್ದರಿಂದ 'ಮಂಗಳೂರು ಸಮಾಚಾರ'ದಲ್ಲಿ 'ನೈತಿಕ ವಿಚಾರ'ಗಳು ಎಂಬ ಸಾಹಿತ್ಯಿಕ ಗದ್ಯ ಬರಹವೇ ಮೊದಲ ಕನ್ನಡ ಅಂಕಣ ಸಾಹಿತ್ಯ ಬರಹವಾಗಿದೆ. ಎಂದು ಈ ವರೆಗಿನ ಆಧಾರಗಳಿಂದ ನಿರ್ಧರಿಸಬಹುದು. ಹೀಗಾಗಿ ಕನ್ನಡ ಪತ್ರಿಕೋದ್ಯಮ ಜನ್ಮ ತಾಳಿದಂದಿನಿಂದಲೇ ಅಂಕಣ ಸಾಹಿತ್ಯವೂ ಹುಟ್ಟು ಪಡೆಯಿತು ಎನ್ನಬಹುದು.

ಸ್ವಾತಂತ್ರ್ಯ ಸಂಗ್ರಾಮದ ದಿನಮಾನಗಳಲ್ಲಿ ನಿಯತಕಾಲಿಕೆಯ ಒಡಲನ್ನು ಆವರಿಸಿ ಪ್ರಕಟವಾಗಿರುವ ಅಂಕಣಗಳು ಶೀಘ್ರವಾಗಿ ಸಹೃದಯರನ್ನು ತಲುಪಿಸುವ ಸಾಧನಗಳಾಗಿದ್ದವು. ಭಾರತಿಯ ಮನಸ್ಸುಗಳಲ್ಲಿ ಸ್ವರಾಜ್ಯದ ಕಲ್ಪನೆಯನ್ನು ಕಟ್ಟುವಲ್ಲಿ ಕೆಲವು ಅಂಕಣಗಳನ್ನು ಅವಲೋಕಿಸಿದಾಗ ಪ್ರಮುಖವಾಗಿ "ಹರ್ಮನ್ ಮೊಗ್ಲಿಂಗ' ತಮ್ಮ ಸಂಪಾದಿತ 'ಮಂಗಳೂರು ಸಮಾಚಾರ' ಪತ್ರಿಕೆ, 'ಕ್ರಿ.ಶ.1869 ರಿಂದ ಕ್ರಿ.ಶ.1872 ರ' 'ಬೆನಗಲ್ ರಾಮರಾಯರ' 'ವಾಗ್ಭೂಷಣ' ಇದೊಂದು ಮಾಸ ಪತ್ರಿಕೆಯಾಗಿದ್ದು. ಇದರಲ್ಲಿ ಜೀವಿತದವರೆಗೂ ಅವರು ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಂಬಂಧಪಟ್ಟ ವಿಷಯವನ್ನು ಅಂಕಣ ರೂಪದಲ್ಲಿ ಬರೆದಿದ್ದಾರೆ. 'ಸ್ವದೇಶಕ್ಕಾಗಿ ಆತ್ಮಾರ್ಪಣೆ' ಈ ಪತ್ರಿಕೆಗಳು ರಾಷ್ಟ್ರ ಪ್ರೇಮದ ಬೀಜಗಳನ್ನು ಬಿತ್ತಿರುವ ಕುರುಹುಗಳು ಸಂಶೋಧನೆಗೆ ರೋಮಾಂಚನವನ್ನು ಉಂಟುಮಾಡುತ್ತವೆ. ವ್ಯಕ್ತಿ ಚರಿತ್ರೆ, ಅನೇಕ ಘಟನೆಗಳ ಒಳನೋಟ, ನಾಡು–ನುಡಿ ಪ್ರೇಮ, ಸಂಸ್ಕೃತಿ ಮೊದಲಾದ ವಿಷಯಗಳು 'ಬಿ.ವೆಂಕಟಾಚಾರ್ಯರ' ಕ್ರಿ.ಶ.1906 ರಿಂದ ಕ್ರಿ.ಶ.1925 ರವರೆಗೆನ 'ಅವಕಾಶ ತೋಷಿಣೀ' ಪತ್ರಿಕೆಯ ಪ್ರಮುಖ ಅಂಕಣಗಳಾಗಿದ್ದವು.'[3]

ಕನ್ನಡ ಭಾಷೆಯ ಯಾವುದೇ ದಿನ ಪತ್ರಿಕೆ, ವಾರಪತ್ರಿಕೆ, ಮಾಸಪತ್ರಿಕೆ, ಇತರೆ ನಿಯತಕಾಲಿಕೆಯನ್ನು ಅವಲೋಕಿಸಿದಾಗಲೂ ಒಂದಲ್ಲಾ ಒಂದು ಅಂಕಣವು ನಾಡು–ನುಡಿ, ಸಂಸ್ಕೃತಿ, ಭಾಷಾಭಿಮಾನ, ದೇಶಾಭಿಮಾನ, ಸ್ವಾತಂತ್ರ್ಯದ ಕಿಚ್ಚನ್ನು ಕೆಚ್ಚೆದೆಯಲ್ಲಿ ತುಂಬುವಲ್ಲಿ ಬಹು ಮುಖ್ಯವಾದ ಪಾತ್ರವಹಿಸುತ್ತವೆ. 'ಬ್ರಿಟಿಷರ ದತ್ತು ಸ್ವೀಕಾರ ಕಾಯಿದೆ, ಸಹಾಯಕ ಸೈನ್ಯ ಪದ್ಧತಿ ಮತ್ತು ಅವರ ಒಡೆದಾಳುವ ಕುಟಿಲ ತಂತ್ರಗಳನ್ನು ಹಾಗೂ ದೇಶದ ಎಲ್ಲ ರಾಜ್ಯಗಳನ್ನು ತಮ್ಮ ಸ್ವಧೀನಕ್ಕೆ ತೆಗೆದುಕೊಂಡ ವಿಷಯಗಳನ್ನು ಅನೇಕ ಪತ್ರಿಕೆಗಳು ಪ್ರಕಟಿಸಿದವು. ಹೀಗೆ ದೇಶದ ಜನತೆಗೆ ಜಾಗೃತಿ ಮೂಡಿಸಿರುವ ಕಾರ್ಯವು 'ವಿಶ್ವಕರ್ಣಾಟಕ' ಮತ್ತು 'ಜಯಕರ್ನಾಟಕ' ಪತ್ರಿಕೆಗಳಿಂದಾಗಿರುವ ಸಾಹಸವನ್ನು ನಾವು ಎಂದು ಮರೆಯಲು ಸಾಧ್ಯವಿಲ್ಲದ ಸಂಗತಿಗಳು ಸಂಶೋಧನೆಯ ಆಧಾರದಿಂದ ತಿಳಿದು ಬರುತ್ತದೆ. ಪತ್ರಿಕೆಗಳ ಭಾಗವಾಗಿರುವ ಅಂಕಣಗಳು ಓದುಗರನ್ನು ಇಷ್ಟೊಂದಾಗಿ ಆಸಕ್ತಿಯಿಂದ ವಾಚಿಸದಿದ್ದರೆ, ಅವು ಅಷ್ಟು ವ್ಯಾಪಕವಾಗಿ ಪ್ರಕಟಗೊಳ್ಳುತ್ತಿರಲಿಲ್ಲಾ.,[4] ಅಂದು ಕನ್ನಡ ನಾಡಿನಲ್ಲಿ ಅಂಕಣಗಳು ಯಾವುದೇ ನಿಯತಕಾಲಿಕೆಯ ಅವಿಭಾಜ್ಯ ಅಂಗವಾಗಿ ಬೇರು ಬಿಟ್ಟಿರುವುದು ಕಂಡುಬಂದಿದೆ. ಆದ್ದರಿಂದ ಇಷ್ಟೊಂದು ಜನಪ್ರೀಯತೆಯನ್ನು ಗಳಿಸಿಕೊಂಡಿರುವ ಅಂಕಣ ಸಾಹಿತ್ಯವು ದೇಶ ಪ್ರೇಮ ಬೆಳೆಸುವಲ್ಲಿ ಮತ್ತು ಸ್ವಾತಂತ್ರ್ಯ ಕಟ್ಟುವಲ್ಲಿ ಪ್ರಮುಖ ಪಾತ್ರವಹಿಸಿದೆ.

## ಕೆಲವು ಪತ್ರಿಕೆಗಳಲ್ಲಿ ಪ್ರಕಟಗೊಂಡ ಅಂಕಣಗಳ ಮಾದರಿ ಚಿತ್ರಗಳು



ಮಂಗಳೂರ ಸಮಾಚಾರಪತ್ರಿಕೆ


ವಿಶ್ವಕರ್ಣಾಟಕ

ವಿಶ್ವಕರ್ಣಾಟಕ ಪತ್ರಿಕೆ


ಜಯಕರ್ನಾಟಕ

ಜಯಕರ್ನಾಟಕ ಪತ್ರಿಕೆ

ಆಧುನಿಕ ಕನ್ನಡ ಸಾಹಿತ್ಯ ರೂಪಗಳಾದ ಕಾವ್ಯ, ಕಥೆ, ಕಾದಂಬರಿ, ನಾಟಕ, ಪ್ರಬಂಧ, ಜೀವನ ಚರಿತ್ರೆ, ಆತ್ಮಚರಿತ್ರೆ, ಪ್ರವಾಸ ಸಾಹಿತ್ಯ, ವಿಮರ್ಶೆ, ಸಂಶೋಧನೆ, ಸಂಪಾದನೆ ಮೊದಲಾದ ಸೃಜನಾತ್ಮಕ ಬರವಣಿಗೆಗಳಲ್ಲಿ ಪತ್ರಿಕಾ ಸಾಹಿತ್ಯವು ಕೂಡಾ ಇತ್ತೀಚಿನ ದಶಕಗಳಲ್ಲಿ ಹೆಚ್ಚು ಪ್ರಾಮುಖ್ಯತೆ ಸಾಧಿಸಿದೆ. ಅದರಲ್ಲಿಯೂ 'ಅಂಕಣ ಸಾಹಿತ್ಯ'ಕ್ಕೂ ಹೆಚ್ಚಿನ ಮನ್ನಣೆ ದೊರೆತಿದೆ. ಹೀಗೆ ಭಾರತದ ಸ್ವಾತಂತ್ರ್ಯ ಹೋರಾಟ ಮತ್ತು ಹೋರಾಟಗಾರರಲ್ಲಿ ರಾಷ್ಟ್ರದ ಪ್ರೇಮ, ನಾಡು-ನುಡಿ ಪ್ರೇಮ, ರಾಷ್ಟ್ರ ಕಟ್ಟುವಲ್ಲಿ ಅಂಕಣಕಾರರ ಮತ್ತು ಅಂಕಣಗಳ ಪಾತ್ರ ಮಹತ್ವವಾದದ್ದು. ಹಿಂದಿನ ಅಂಕಣಕಾರರಿಂದ ಹಿಡಿದು ಪ್ರಸ್ತುತ ಅಂಕಣಕಾರರವರೆಗೂ ಅವಲೋಕನ ಮಾಡಲಾಯಿತು. ಅಲ್ಲಿ ಅಂಕಣಕಾರರು ತಮ್ಮ ಅಂಕಣಗಳಲ್ಲಿ ಒಂದಲ್ಲ ಒಂದು ಅಂಕಣವನ್ನು ರಾಷ್ಟ್ರದ ಪ್ರೇಮ, ನಾಡು-ನುಡಿ ಪ್ರೇಮ, ರಾಷ್ಟ್ರ ಕಟ್ಟುವ, ನಾಡಿನ ಭಾಷೆ, ಸಂಸ್ಕೃತಿ, ಕಲೆ, ಶಿಲ್ಪಕಲೆ, ಹೀಗೆ ಹತ್ತು ಹಲವಾರು ವಿಷಯಗಳ ಬಗ್ಗೆ ಬರೆದಿರುವುದು ಕಂಡುಬರುತ್ತದೆ.

## ಗ್ರಂಥಋಣ


1. ಕನ್ನಡ ಸಾಹಿತ್ಯ ಪತ್ರಿಕೆಗಳು: ಇತಿಹಾಸ-ವರ್ತಮಾನ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು 1993.
2. ಸಂಪ್ರತಿ, ಹಾ ಮಾ ನಾಯಕ , ಹೇಮಂತ ಸಾಹಿತ್ಯ ಪ್ರಕಾಶನ, 2007.
3. ಚಹಾದ ಜೋಡಿ, ಸಿದ್ಧಲಿಂಗ ಪಟ್ಟಣಶೆಟ್ಟಿ, ಅನನ್ಯ ಪ್ರಕಾಶನ, ಧಾರವಾಡ, 1996.
4. ಅಂಕಣತೋಟ, ವಾಗೀಶ ಬ. ಹೂಗಾರ (ಸಂ.), ಮಲೆನಾಡು ಪ್ರಕಾಶನ, ಚಿಕ್ಕಮಗಳೂರು, 2020.
5. ಸಾಹಿತ್ಯ ಪ್ರಕಾರಗಳು, ಪಿ.ವಿ.ಶಾಸ್ತ್ರಿ, ಪ್ರತಿಭಾ ಗ್ರಂಥಮಾಲೆ, ಧಾರವಾಡ, 2011.
6. ಪ್ರಬಂಧ ಪ್ರಪಂಚ, ಎಚ್.ವಿ. ನಾಗೇಶ, ಡಾ. ರಾ.ಯ. ಧಾರವಾಡಕರ ಸನ್ಮಾನ ಸಮಿತಿ, ಧರವಾಡ, 1990.
7. ಕನ್ನಡ ಸಾಹಿತ್ಯ ವಿಮರ್ಶೆಯ ತಾತ್ವಿಕ ವಿವೇಚನೆ, ಡಾ.ರಂ.ಶ್ರೀ.ಮುಗಳಿ, 1957.
8. ಕನ್ನಡದಲ್ಲಿ ಅಂಕಣ ಸಾಹಿತ್ಯ, ಡಾ.ದೊಡ್ಡೇಗೌಡ .ಬಿ .ಸಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರ, 2021.


## ಅಡಿಟಿಪ್ಪಣಿಗಳು

1. ಕನ್ನಡ ಸಾಹಿತ್ಯ ಪತ್ರಿಕೆಗಳು: ಇತಿಹಾಸ-ವರ್ತಮಾನ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಪುಟ-5
2. ಕನ್ನಡದಲ್ಲಿ ಅಂಕಣ ಸಾಹಿತ್ಯ, ಡಾ. ದೊಡ್ಡೇಗೌಡ. ಬಿ.ಸಿ.-ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರ,ಪುಟ-6,
3. ಇಗೋ ಕನ್ನಡ ಸಾಮಾಜಿಕ ನಿಘಂಟು, ಜಿ.ವೆಂಕಟಸುಬ್ಬಯ್ಯ, ನವಕರ್ನಾಟಕ ಪ್ರಕಾಶನ, ಬೆಂಗಳೂರು,1997,ಪುಟ-
4. ಪ್ರಬಂಧ ಪ್ರಪಂಚ, ಎಚ್. ವಿ. ನಾಗೇಶ್, ಡಾ. ರಾ.ಯ. ಧಾರವಾಡಕರ ಸನ್ಮಾನ ಸಮಿತಿ, ಧಾರವಾಡ,1990,ಪುಟ-